# MyCARE

ಪಯಣದ ಪ್ರತೀ ಹೆಜ್ಜೆಯಲ್ಲೂ ಸಹಾಯ ಮಾಡುತ್ತದೆ



## “ಟೈಪ್ 1 ಡಯಾಬಿಟಿಸ್

ಇರುವವರಲ್ಲಿ, ಇನ್ಸುಲಿನ್ ಬಗ್ಗೆ ಇನ್ನಷ್ಟು ತಿಳಿದುಕೊಳ್ಳೋಣ”


USV

ನೀವು ಆಹಾರ ಸೇವಿಸಿದಾಗ, ಅದರಲ್ಲಿರುವ ಕಾರ್ಬೋಹೈಡ್ರೇಟ್, ಗ್ಲೂಕೋಸ್ ಆಗಿ ಪರಿವರ್ತನೆಗೊಳ್ಳುತ್ತದೆ; ತದನಂತರ, ಅದು **ರಕ್ತ-ಪರಿಚಲನೆಗೆ ಬಿಡುಗಡೆಗೊಳ್ಳುತ್ತದೆ.**




ನಿಮ್ಮ ಬ್ಲಡ್ ಶುಗರ್ ಮಟ್ಟ ಹೆಚ್ಚಿದಾಗ,


**ಮೇದೋಜ್ಜೀರಕ ಗ್ರಂಥಿಯು ಇನ್ಸುಲಿನ್ ಎಂಬ ಹಾರ್ಮೋನನ್ನು ಬಿಡುಗಡೆಗೊಳಿಸುತ್ತದೆ.**



ಸಕ್ಕರೆಯನ್ನು (ಗ್ಲೂಕೋಸ್) **ರಕ್ತದಿಂದ ಶರೀರದ ಜೀವಕೋಶಗಳಿಗೆ** ಸಾಗಿಸಲು ಇನ್ಸುಲಿನ್ ಸಹಾಯ ಮಾಡುತ್ತದೆ; ಜೀವಕೋಶಗಳಲ್ಲಿ, ಶಕ್ತಿಗಾಗಿ ಗ್ಲೂಕೋಸ್‌ನ ಉಪಯೋಗವಾಗುತ್ತದೆ.



**ಟೈಪ್ 1 ಡಯಾಬಿಟಿಸ್‌ನಲ್ಲಿ,** ಆಟೊಇಮ್ಯೂನ್ ಪ್ರತಿಕ್ರಿಯೆಯ ಕಾರಣ, **ಶರೀರದ ರೋಗ-ಪ್ರತಿರೋಧಕ ವ್ಯವಸ್ಥೆಯು, ಇನ್ಸುಲಿನ್ ಉತ್ಪಾದಿಸುವ ತನ್ನದೇ ಜೀವಕೋಶಗಳ ಮೇಲೆ ದಾಳಿ ನಡೆಸುತ್ತದೆ.** ಶರೀರವು ತುಂಬ ಕಡಿಮೆ ಪ್ರಮಾಣದಲ್ಲಿ ಅಥವಾ ಶೂನ್ಯ ಇನ್ಸುಲಿನ್ ಉತ್ಪಾದಿಸುತ್ತದೆ; ಹೀಗಾಗಿ, ರಕ್ತದಲ್ಲಿ ಶುಗರ್‌ನ ಪ್ರಮಾಣ ತುಂಬ ಹೆಚ್ಚಾಗಿ ಉಳಿಯುತ್ತದೆ.




**ಟೈಪ್ 1 ಡಯಾಬಿಟಿಸನ್ನು** ಹಿಂದೆ **ಇನ್ಸುಲಿನ್-ಅವಲಂಬಿತ** ಅಥವಾ **ಕಿಶೋರಾವಸ್ಥೆಯ ಡಯಾಬಿಟಿಸ್** ಎಂದು ಕರೆಯಲಾಗುತ್ತಿತ್ತು ; ಏಕೆಂದರೆ, ಇದನ್ನು ಬಾಲ್ಯದಲ್ಲಿ, ಹದಿಹರೆಯದಲ್ಲಿ ಅಥವಾ ಎಳೆಯ-ಯುವಜನರಲ್ಲಿ ಪತ್ತೆ ಹಚ್ಚಲಾಗುತ್ತಿತ್ತು . ಆದಾಗ್ಯೂ ಇದು ಯಾವುದೇ ವಯಸ್ಸಿನಲ್ಲಿ ಉಂಟಾಗಬಹುದು.


ಆದಕ್ಕಾಗಿಯೆ, ಟೈಪ್ 1 ಡಯಬಿಟಿಸ್ ಇರುವ ವ್ಯಕ್ತಿಗಳು, ತಮ್ಮ ಬ್ಲಡ್ ಶುಗರ್ ಮಟ್ಟವನ್ನು ಸಾಮಾನ್ಯ ಶ್ರೇಣಿಯಲ್ಲಿ ಉಳಿಸಿಕೊಳ್ಳಲು, **ಪ್ರತಿದಿನ ಬಾಹ್ಯ ಇನ್ಸುಲಿನ್ ತೆಗೆದುಕೊಳ್ಳಬೇಕಾಗುತ್ತದೆ.**



**ಬಾಹ್ಯ ಇನ್ಸುಲಿನ್** ಥೆರಪಿಯು, ಸಾಮಾನ್ಯವಾಗಿ ಶರೀರವು ಉತ್ಪಾದಿಸುವ **ಇನ್ಸುಲಿನ್‌ಗೆ ಒಂದು ಪರ್ಯಾಯವಷ್ಟೇ** ಆಗಿದೆ.



**ಅನೇಕ ಬಗೆಯ ಇನ್ಸುಲಿನ್‌ಗಳು ಇಂದು ಲಭ್ಯವಿವೆ.** ನಿಮಗೆ ಯಾವ ಬಗೆಯ ಇನ್ಸುಲಿನ್ ಅಗತ್ಯವಿದೆ ಮತ್ತು ಅದನ್ನು ಎಷ್ಟು ಬಾರಿ ತೆಗೆದುಕೊಳ್ಳಬೇಕು ಎಂಬುದನ್ನು, ನಿಮ್ಮ ಜೀವನಶೈಲಿ ಹಾಗೂ ನಿಮ್ಮ ಬ್ಲಡ್ ಶುಗರ್ ಮಟ್ಟಗಳನ್ನು ನೋಡಿಕೊಂಡು, ನಿಮ್ಮ ಡಾಕ್ಟರ್ ನಿರ್ಧರಿಸುತ್ತಾರೆ.



ಶೀಘ್ರ ಪರಿಣಾಮಕಾರಿ

ಮಧ್ಯಮ ಪರಿಣಾಮಕಾರಿ

ನಿಧಾನ ಪರಿಣಾಮಕಾರಿ

ಮೇಲಿನ ಚಿತ್ರವನ್ನು ಕೇವಲ ನಿರೂಪಣೆಗಾಗಿ ತೋರಿಸಲಾಗಿದೆ.



“ನೆನಪಿಡಿ, **ಇನ್ಸುಲಿನ್ ಒಂದು ಸುರಕ್ಷಿತ ಹಾಗೂ ನಂಬಿಗಸ್ಥ ಮಿತ್ರನಾಗಿದೆ;** ಇದು ನಿಮಗೆ ಆನಂದದಾಯಕ, ದೀರ್ಘ ಹಾಗೂ ಆರೋಗ್ಯಪೂರ್ಣ ಜೀವನ ನಡೆಸಲು ಸಹಾಯ ಮಾಡುತ್ತದೆ.”



"ಟೈಪ್ 1 ಡಯಾಬಿಟಿಸ್ ಹೊಂದಿರುವವರಿಗೆ **ಇನ್ಸುಲಿನ್ ಒಂದು ಜೀವ-ರಕ್ಷಕವಾಗಿದೆ; ನಿಮಗೆ ಉಪಚಾರ ನೀಡುತ್ತಿರುವ ಡಾಕ್ಟರ್‌ಗೆ ತಿಳಿಸದೆಯೆ** ನೀವು ಎಂದೂ **ಇನ್ಸುಲಿನ್ ತೆಗೆದುಕೊಳ್ಳುವುದನ್ನು** ನಿಲ್ಲಿಸಬಾರದು."

# MyCARE

ಪಯಣದ ಪ್ರತೀ ಹೆಜ್ಜೆಯಲ್ಲೂ ಸಹಾಯ ಮಾಡುತ್ತದೆ

## ಸಂದರ್ಭ


1. ಡಯಾಬಿಟಿಸ್ ಎಂದರೇನು. CDC (2021). ಜುಲೈ 6, 2022 ರಂದು ಇಲ್ಲಿಂದ ಪಡೆಯಲಾಗಿದೆ : https://www.cdc.gov/diabetes/basics/diabetes.html#:~:text=Diabetes%20is%20a%20chronic%20(long,your%20pancreas%20to%20release%20Insulin.

2. ಡಯಾಬಿಟಿಸ್ ಕುರಿತು. ಇಂಟರ್‌ನ್ಯಾಶನಲ್ ಡಯಾಬಿಟಿಸ್ ಫೆಡರೇಶನ್ (IDF). ಜುಲೈ 7, 2022 ರಂದು ಇಲ್ಲಿಂದ ಪಡೆಯಲಾಗಿದೆ : https://www.idf.org/aboutdiabetes/type-1-diabetes.html



**Disclaimer:**
"The guide/presentation/content/literature is for general information, guidance and educational purposes only and is not complete or exhaustive. The guide/ presentation/content/literature is not intended or implied to replace or substitute any current practice and or advice/guidance/diet provided by healthcare professionals. This guide/presentation/content/literature does not constitute any treatment/therapy/medication/diet/opinions for any patients who are on diabetes medication, the patients are required to prior consult their healthcare professional before acting on any change on treatment/therapy/ medication/diet and or opions. USV Private Limited makes no representations as to accuracy, completeness, correctness, suitability or validity of any information contained in this guide/presentation/content/literature and will not be liable for any losses, injuries or damages arising from its


ಸಾರ್ವಜನಿಕ ಹಿತಾಸಕ್ತಿಯಿಂದ ಪ್ರಕಟಿಸಿದವರು: USV